

ಕಲಿಕೆಯನ್ನು  ಪ್ರೋತ್ಸಾಹಿಸುವ ಕ್ರಿಯಾಶೀಲ  ವಿಧಾನಗಳನ್ನು ಪ್ರಯೋಗಿಸಿ, ಮಕ್ಕಳೊಡನೆ ನೀವೂ ಕಲಿಕೆಯಲ್ಲಿ ಭಾಗಿಯಾಗಿ.

ಹೊಸ ಪರೀಕ್ಷಾ ಪದ್ಧತಿ ನಮ್ಮಲ್ಲಿ ಬರುತ್ತದೆಯೋ, ಇಲ್ಲವೋ ಗೊತ್ತಿಲ್ಲ. ಹಾಗಾಗಿ ನಮ್ಮ ಪರೀಕ್ಷಾ ಪದ್ಧತಿಗೆ ತಕ್ಕಂತೆ ಕೆಲವು ತಂತ್ರಗಳನ್ನು ನೀವು ಕಲಿಯಲೇಬೇಕು. ಅವುಗಳನ್ನು ಹೀಗೆ ಪಟ್ಟಿ ಮಾಡಬಹುದು.

### 1. ಸಿದ್ಧತೆಯಷ್ಟೇ ಮುಖ್ಯ ಉತ್ತರಿಸುವ ರೀತಿ!

ಪರೀಕ್ಷೆಗೆ ತಯಾರಿ ಜೋರಾಗಿಯೇ ಶಾಲೆಗಳಲ್ಲಿ ನಡೆಯುತ್ತಿದೆ. ಮಕ್ಕಳು ಎಡೆಬಿಡದೆ, ಎಲ್ಲವನ್ನೂ ಬಿಟ್ಟು ಓದುತ್ತಿದ್ದಾರೆ. ಆದರೆ ಈ ಪರೀಕ್ಷಾ ಸಿದ್ಧತೆಯಷ್ಟೇ, ಕಲಿತದ್ದನ್ನು ಉತ್ತರಿಸುವ ರೀತಿಯೂ ಮುಖ್ಯ ಎಂಬುದನ್ನು ಬಹುತೇಕ  ವಿದ್ಯಾರ್ಥಿಗಳು ತಿಳಿದಿರುವುದಿಲ್ಲ.

ಉತ್ತರ ಪತ್ರಿಕೆಯನ್ನು ಹೇಗೆ ಬರೆಯಬೇಕು ಎಂಬುದರ ಬಗೆಗೆ ಹಲವು ಅಂಶಗಳನ್ನು ತರಗತಿಯಲ್ಲಿ ಶಿಕ್ಷಕರು ಹೇಳುತ್ತಲೇ ಇರುತ್ತಾರೆ. ಅಂದವಾದ ಬರವಣಿಗೆ, ಕಾಟು– ಚಿತ್ತಿಲ್ಲದ ಶಿಸ್ತು ಎಲ್ಲಾ ಕಾಲದಲ್ಲಿಯೂ, ಯಾವ ಶಿಕ್ಷಕನನ್ನೂ ಮೆಚ್ಚಿಸಬಹುದಾದ ತಂತ್ರಗಳೇ. ಕಷ್ಟ ಎನಿಸಿದ ಪ್ರಶ್ನೆಗಳನ್ನು ಕೊನೆಯಲ್ಲಿ ಉತ್ತರಿಸುವುದು, ಸುಲಭವಾದ ಪ್ರಶ್ನೆಗಳನ್ನು  ಮೊದಲು ಉತ್ತರಿಸಬೇಕು ಎಂಬ ಅಂಶವೂ ಗೊತ್ತಿರುವಂಥದ್ದೇ. ಆದರೆ ಪರೀಕ್ಷೆಯ ಸಂದರ್ಭದಲ್ಲಿ ಇದು ನಮಗೆ ಸಾಧ್ಯವಾಗುವುದಿಲ್ಲ ತಾನೆ?

ಅದಕ್ಕೆ ಕಾರಣ ಪರೀಕ್ಷೆ ತರುವ ಆತಂಕ. ಆತಂಕದಲ್ಲಿ ನಮ್ಮ ಬರವಣಿಗೆ ಏರುಪೇರಾಗುತ್ತದೆ. ಮನಸ್ಸಿಗೆ ಅನಿಸಿದ್ದನ್ನು ಬರೆದು, ಆಮೇಲೆ ‘ಅಯ್ಯೋ ಹಾಗಲ್ಲ’ ಎಂದು ಹೊಡೆದು ಹಾಕುವುದು – ಹೀಗೆ ಕಾಟು–ಚಿತ್ತು ಹೆಚ್ಚುತ್ತದೆ. ಆತಂಕ ಮತ್ತಷ್ಟು ಒತ್ತಡ ಸೃಷ್ಟಿಸಿ ಪ್ರಶ್ನೆಗಳನ್ನು ಅರ್ಥ ಮಾಡಿಕೊಳ್ಳದಿರುವಂತೆ ಮಾಡುತ್ತದೆ. ಗಣಿತದಂಥ ವಿಷಯದಲ್ಲಂತೂ ಅಂಕಗಳನ್ನು ಮಕ್ಕಳು ಕಳೆದುಕೊಳ್ಳುವುದು ಕಷ್ಟಕರ ಸಮಸ್ಯೆಗಳಲ್ಲಲ್ಲ. ಬದಲಾಗಿ 2x 3 = 5,  3 x 3=6 ಇಂಥ, ಗಮನಿಸಿದರೆ ಸುಲಭವಾಗಿ ತಡೆಯಬಹುದಾದ ತಪ್ಪುಗಳಲ್ಲಿ! ಪ್ರಶ್ನೆಗಳನ್ನು ಪೂರ್ತಿಯಾಗಿ ಓದುವುದು ಆ ಕ್ಷಣದಲ್ಲಿ ಸಮಯ ವ್ಯರ್ಥ ಮಾಡಿದಂತೆ ಎನಿಸಬಹುದು. ಆದರೆ ನಮ್ಮ ಬುದ್ಧಿ ಆತಂಕದ ಕೈಯಲ್ಲಿರುವಾಗ ಮೋಸಗೊಳ್ಳಬಹುದು. ಸ್ವಲ್ಪ ಬದಲಿರುವ ಪ್ರಶ್ನೆಯನ್ನು ತನಗೆ ಗೊತ್ತಿರುವ ಇನ್ಯಾವುದೋ ಪ್ರಶ್ನೆ ಎಂದು ತಪ್ಪಾಗಿ ಭಾವಿಸಬಹುದು. ಹಾಗಾಗಿ ಪ್ರಶ್ನೆ ಪತ್ರಿಕೆಯನ್ನು ಸರಿಯಾಗಿ ಓದುವುದು ಅತ್ಯಗತ್ಯ.



